ದಿನಾಂಕಃ 27/12/2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂ. ಮುಖ್ಯ ವಿಚಾರಣೆಃ ಸಸಅ ರವರಿಂದಃ**

3. 2016 ರಲ್ಲಿ ನಾನು ಯರೇಬೂದಿಹಾಳ ಗ್ರಾಮದ ಕೆವಿಜಿ ಬ್ಯಾಂಕಿನ ಶಾಖಾ ವ್ಯವಸ್ಥಾಪಕರಾದ ಚಾಸಾಃ1 ರವರಿಗೆ ಪ್ರಾದೇಶಿಕ ಕಚೇರಿ ಅಧಿಕಾರಿಗಳು ಆರೋಪಿಯ ವಿರುದ್ಧ ಹಣ ದುರುಪಯೋಗ ಮಾಡಿಕೊಂಡಿರುತ್ತಾರೆ ಎಂದು ಪಿರ್ಯಾಧಿ ದಾಖಲು ಮಾಡುವಂತೆ ಆದೇಶ ಮಾಡಿರುತ್ತಾರೆ. ಆ ಸಮಯದಲ್ಲಿ ನನ್ನನ್ನು ತನಿಖಾಧಿಕಾರಿಯಾಗಿ ನೇಮಕ ಮಾಡಿದರು. ಈ ಬ್ಯಾಂಕಿನ ವ್ಯವಸ್ಥಾಪಕರು ಮಾಡುವ ಜವಾಬ್ದಾರಿಗಳು ಮತ್ತು ಕರ್ತವ್ಯಗಳು ಸಾಲ ನೀಡುವುದು, ಠೇವಣಿ ಸಂಗ್ರಹಣೆ ಮಾಡುವುದು, ಬೆಳೆ ಹಾಗೂ ಇತರೆ ಸಾಲ ಪಡೆಯುವಾಗ ಅರ್ಜಿಗಳ ಮೇಲೆ ಸಹಿ ಪಡೆದು, ಆಸ್ತಿ ಉತಾರಗಳು ಹಣ ಭದ್ರತೆಗೆ ದಾಖಲೆಗಳನ್ನು ಪಡೆಯುವುದು, ಸಿಬ್ಬಂದಿಗಳ ಕಾರ್ಯಕ್ಷಮತೆಯನ್ನು ಪರೀಕ್ಷಿಸುವುದು ಮತ್ತು ಗ್ರಾಹಕರಿಗೆ ಸಾಲ ನೀಡಿದ ನಂತರ ಕಂತುಗಳನ್ನು ಮತ್ತು ಬಡ್ಡಿಯನ್ನು ನಿರ್ಧರಿಸಿ ಬಡ್ಡಿ ವಸೂಲು ಮಾಡುವುದು ಶಾಖಾ ವ್ಯವಸ್ಥಾಪಕರ ಕರ್ತವ್ಯವಾಗಿರುತ್ತದೆ. ಬ್ಯಾಂಕಿನಲ್ಲಿ ಹಣ ದುರುಪಯೋಗವಾಗಿದ್ದು ಕಂಡುಬಂದರೆ ಪ್ರಾದೇಶಿಕ ಮತ್ತು ಕೇಂದ್ರ ಕಚೇರಿಗೆ ತಿಳಿಸಬೇಕು. ಈ ಎಲ್ಲಾ ಜವಾಬ್ದಾರಿಗಳು ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸುವ ಶಾಖಾ ವ್ಯವಸ್ಥಾಪಕರಿಗೆ ಇರುತ್ತದೆಲ. ನಾನು ಪರಿಶೀಲನೆ ಮಾಡಿದಾಗಅಶೋಕ ನೀಲಪ್ಪ ಗೌಡಪ್ಪನವರ, ಬಸವರಾಜ ಬಿಂಕದಕಟ್ಟಿ, ಮಾರ್ತೆಂಡಪ್ಪ

ಹುರಳಿಕೊಪ್ಪಿ, ಶಿವಪ್ಪ ಕಾಡರಗಿ ಮತ್ತು ಸುರೇಶ ಕಾರಡಗಿ, ಮಂಜವ್ವ ಯಲಿವಾಳ ಮತ್ತು ಚೆನ್ನಬಸಪ್ಪ ಮದಗುಣಕಿ. ಸದರಿಯವರ ಪೈಕಿ ಅಶೋಕ ನೀಲಪ್ಪ ಗೌಡಪ್ಪನವರು ಬೆಳೆ ಸಾಲ ಹಾಗೂ ಇತರೆ ಸಾಲ ಪಡೆಯುವುದಾಗಿದ್ದು, ಸದರಿಯವರು ನನ್ನ ತನಿಖೆ ಸಮಯದಲ್ಲಿ ಹಾಜರು ಇರಲಿಲ್ಲ. ಸದರಿ ಬೆಳೆ ಸಾಲ ನೀಡುವ ಸಮಯದಲ್ಲಿ ಯಾವುದೇ ಅವ್ಯವಹಾರ ಆಗಿಲ್ಲ ಎಂದು ಹೇಳಿಕೆ ನೀಡಿದ್ದಾರೆ. 2012 ರಲ್ಲಿ ರೂ 60,000/ ಬೆಳೆ ಸಾಲ ಮಂಜೂರು ಮಾಡಿದ್ದು, ಸದರಿ ಸಾಲ ಮಂಜೂರು ಮಾಡುವ ಸಮಯದಲ್ಲಿ ಆರೋಪಿಯು ವ್ಯವಸ್ಥಾಪಕರಾಗಿದ್ದರು. ನನ್ನ ತನಿಖಾ ಕಾಲದಲ್ಲಿ ಚಾಸಾ:5 ಬಸವರಾಜ ಬಿಂಕದಕಟ್ಟಿ ವಿಚಾರಿಸಿದಾಗ ಆತ ನಾನು ಯಾವುದೇ ಸಾಲ ಪಡೆದುಕೊಂಡಿಲ್ಲ, ಯಾವುದೇ ಕಾಗದ ಪತ್ರಗಳ ಮೇಲೆ ಸಹಿ ಮಾಡಿರುವುದಿಲ್ಲ ಮತ್ತು ಖೊಟ್ಟಿ ದಾಖಲೆಗಳನ್ನು ಸೃಷ್ಟಿ ಮಾಡಿ ಆರೋಪಿ ಹಣ ದುರುಪಯೋಗ ಮಾಡಿಕೊಂಡಿರುತ್ತಾರೆ ಎಂದು ಹೇಳಿರುತ್ತಾರೆ. ಮಾರ್ತಂಡೆಪ್ಪ ಹುರಳಿಕೊಪ್ಪಿ ಪೋತಿಯಾಗಿದ್ದು, ಸದರಿಯವರ ಸಾಲವನ್ನು ಅವರ ಮಕ್ಕಳ ತಿಳುವಳಿ ಮಾಡಿರುತ್ತಾರೆ. 2006 ರಲ್ಲಿ ಮಾರ್ತೆಂಡಪ್ಪ ಹುರಳಿಕೋಪ್ಪಿರವರು ರೂ 1,50,000/ ಹಣವನ್ನು ಬೆಳೆ ಸಾಲ ಪಡೆದಿದ್ದರು.

(ಈ ಹಂತದಲ್ಲಿ ಸಾಕ್ಷಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದಂತೆ ನನ್ನ ಉಖ್ತುಲೇಖನಕ್ಕೆ ದಿ: 27/12/2022 ರಂದು ಸಂ. 4:15 ರಿಂದ 4:30 ಗಂಟೆಯವರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಇದೆ

Sd/-

ಹಿರಿಯ ದಿವಾಣಿ ನ್ಯಾಯಾಧೀಶರು,

ಕುಂದಗೋಳ